# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 583(649) |
| 3 | ಉತ್ತರಿಸಬೇಕಾದ ದಿನಾಂಕ | : | 13-12-2024 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ MGNREGA ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಕೂಲಿ ಪಾವತಿ ಮತ್ತು ಸಾಮಗ್ರಿ ವೆಚ್ಚ ಪಾವತಿಗೆ ಹಣಕಾಸಿನ ಕೊರತೆ ಇದೆಯೇ; (ವಿವರ ನೀಡುವುದು)</td><td>ಅನುದಾನದ ಕೊರತೆ ಇಲ್ಲ.</td></tr>
<tr><td>ಆ)</td><td>2023-24 ಮತ್ತು 2024-25ನೇ ಸಾಲಿನಲ್ಲಿ ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; (ವಿವರಗಳನ್ನು ನೀಡುವುದು)</td><td>2023-24 ಹಾಗೂ 2024-25ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>2023-24</td><td>5415.06</td></tr>
<tr><td>2024-25<br>(ದಿ: 06.12.2024ರಂತೆ)</td><td>4997.02</td></tr>
</table></td></tr>
<tr><td>ಇ)</td><td>2023-24 ಹಾಗೂ 2024-25ನೇ ಸಾಲಿನ MGNREGA ಈ ಯೋಜನಯಡಿಯಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡ ಕಾಮಗಾರಿಗಳಾವುವು; (ಪ್ರಗತಿ ವಿವರಗಳನ್ನು ನೀಡುವುದು)</td><td>2023-24 ಹಾಗೂ 2024-25ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ<br>1. ವಿಜಯಪುರ ಜಿಲ್ಲೆಯಲ್ಲಿ ಕೆರೆ/ಹಳ್ಳದ ಹೂಳೆತ್ತುವುದು, ಕೃಷಿ ಹೊಂಡ, ಬದು ನಿರ್ಮಾಣ, ಬೋರವೆಲ್ ರಿಚಾರ್ಜ್‌ಪಿಟ್, ಮಳೆ ನೀರು ಕೊಯ್ಲು, ಅರಣ್ಯೀಕರಣ ಕಾಮಗಾರಿಗಳು ತೋಟಗಾರಿಕೆ ಬೆಳೆಗಳು, ದನಗಳ ಶೆಡ್ ಮೇಕೆ ಶೆಡ್, ಕೋಳಿ ಸಾಕಾಣಿಕೆ ಶೆಡ್. ಶಾಲಾ ಕಂಪೌಂಡ ನಿರ್ಮಾಣ, ಶಾಲಾ ಶೌಚಾಲಯ, ಶಾಲಾ ಆಟದ ಮೈದಾನ, ಶಾಲಾ ಅಡುಗೆ ಕೋಣೆ. ಅಂಗನವಾಡಿ ಕಟ್ಟಡ, ಸೋಕ್ ಪಿಟ್- ಮುರಮ್ ರಸ್ತೆ, ಚರಂಡಿ ನಿರ್ಮಾಣ, ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು.<br>2023-24ನೇ ಸಾಲಿನಲ್ಲಿ ಒಟ್ಟಾರೆ 65,221 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 32,220 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 2024-25ನೇ ಸಾಲಿನಲ್ಲಿ ಒಟ್ಟಾರೆ 54,091 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ ದಿ: 09.12.2024ರ ಅಂತ್ಯಕ್ಕೆ 20,811 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ<br>2. ಬಾಗಲಕೋಟೆ ಜಿಲ್ಲೆಯಲ್ಲಿ ಕೆರೆ/ಹಳ್ಳ ಹೂಳೆತ್ತುವುದು, ಕೃಷಿ ಹೊಂಡ, ಬದು ನಿರ್ಮಾಣ, ಮಳೆನೀರು ಕೊಯ್ಲು, ಅರಣ್ಯೀಕರಣ ಕಾಮಗಾರಿಗಳು, ತೋಟಗಾರಿಕ ಕಾಮಗಾರಿಗಳು, ಬೋರವೆಲ್ ರಿಚಾರ್ಜ್ ಪಿಟ್, ದನದ ಕೊಟ್ಟಿಗೆ, ಮೇಕೆ ಶೆಡ್, ಕೋಳಿ ಸಾಕಾಣಿಕೆ ಶೆಡ್, ಶಾಲಾ ಶೌಚಾಲಯ, ಶಾಲಾ ಕಂಪೌಂಡ್, ಶಾಲಾ ಆಟದ ಮೈದಾನ, ಅಂಗನವಾಡಿ ಕಟ್ಟಡ, ಶಾಲಾ ಅಡುಗೆ ಕೋಣೆ, ರಸ್ತೆ ಸುಧಾರಣೆ, ಚರಂಡಿ ನಿರ್ಮಾಣ, ಸ್ಮಶಾನ ಅಭಿವೃದ್ಧಿ, ಸಿಸಿ ರಸ್ತೆ ಕಾಮಗಾರಿಗಳು.</td></tr>
</table>

| | | |
|---|---|---|
| | | 2023-24ನೇ ಸಾಲಿನಲ್ಲಿ ಒಟ್ಟಾರೆ 32,308 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 19,305 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 2024-25ನೇ ಸಾಲಿನಲ್ಲಿ ಒಟ್ಟಾರೆ 30,277 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ ದಿ: 09.12.2024ರ ಅಂತ್ಯಕ್ಕೆ 13,305 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ(**ಅನುಬಂಧ-1ರಲ್ಲಿ ಲಗತ್ತಿಸಿದೆ**). |
| ಈ) | ಈ ಯೋಜನೆಯಡಿಯಲ್ಲಿ ಪ್ರಸ್ತುತ ಆರ್ಥಿಕ ಸಾಲಿನಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಬಿಡುಗಡೆಯಾದ ಕೂಲಿಯ ವೆಚ್ಚ ಮತ್ತು ಸಾಮಗ್ರಿ ವೆಚ್ಚದ ಮೊತ್ತ ಎಷ್ಟು? (ಅನುದಾನದ ವಿವರಗಳನ್ನು ಗ್ರಾಮ ಪಂಚಾಯಿತಿವಾರು ನೀಡುವುದು) | **ವಿಜಯಪುರ ಜಿಲ್ಲೆ**ಗೆ ಬಿಡುಗಡೆಯಾದ ಒಟ್ಟು ಅನುದಾನ ರೂ. 139.8 ಕೋಟಿಗಳು.<br>ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೂ ಪಾವತಿಸಿರುವ<br>• ಕೂಲಿ ಮೊತ್ತ ರೂ. 106.58 ಕೋಟಿಗಳು.<br>• ಸಾಮಗ್ರಿ ರೂ. 32.98 ಕೋಟಿಗಳು. (ದಿ: 10.12.2024ರವರೆಗೆ)<br>**ಬಾಗಲಕೋಟೆ ಜಿಲ್ಲೆ**ಗೆ ಬಿಡುಗಡೆಯಾದ ಒಟ್ಟು ಅನುದಾನ ರೂ. 133.62 ಕೋಟಿಗಳು.<br>ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೂ ಪಾವತಿಸಿರುವ<br>• ಕೂಲಿ ಮೊತ್ತ ರೂ. 105.10 ಕೋಟಿಗಳು<br>• ಸಾಮಗ್ರಿ ರೂ. 28.53 ಕೋಟಿಗಳು. (ದಿ: 10.12.2024ರವರೆಗೆ)<br><br>(ಗ್ರಾಮ ಪಂಚಾಯಿತಿವಾರು ಮಾಹಿತಿಯನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.) |

**ಸಂಖ್ಯೆ: ಗ್ರಾಅಪ/1218(8)/ಉಖಾಯೋ/2024**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು